

ಬಾಲ್ಯದಲ್ಲಿ ಮಣ್ಣಿನ ಜೊತೆಗೇ ಆಟವಾಡುತ್ತ ಬೆಳೆದವರು ಜಗನ್ನಾಥ ಜಕ್ಕೇಪಳ್ಳಿ. ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಅನಾಥಭಾವ ಕಾಡದಂತೆ ನೋಡಿಕೊಂಡವರು ತಾಯಿ ಮತ್ತು ಸಹೋದರರು. ಮನೆಗೆಲಸದ ಜೊತೆ ಮಡಕೆ ಮಾಡುವ ಕಾಯಕದಲ್ಲಿಯೂ ತೊಡಗಿಸಿಕೊಳ್ಳುತ್ತಿದ್ದ ತಾಯಿ ಮತ್ತು ಕುಂಬಾರ ವೃತ್ತಿಯನ್ನೇ ಅವಲಂಬಿಸಿ ಬದುಕು ನಡೆಸುತ್ತಿದ್ದ ಅಣ್ಣಂದಿರ ಜೊತೆಗೆ ಹಸಿಮಣ್ಣು ತೆಗೆದುಕೊಂಡು ಅದಕ್ಕೆ ಆಕಾರ ಕೊಡಲು ಆರಂಭಿಸಿದರು.

ಸದ್ಯ ರಾಮನಗರ ಜಿಲ್ಲೆಯ ಬಿಡದಿಯ ನಿವಾಸಿ ಆಗಿರುವ ಶಿಲ್ಪಿ ಜಗನ್ನಾಥ ಮೂಲತಃ ಗುಲ್ಬರ್ಗ ಜಿಲ್ಲೆಯ ನಿಡಗುಂದ ಗ್ರಾಮದವರು. ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ತೇರಿಗೆ ಬಣ್ಣ ಹಚ್ಚುವುದನ್ನು ನೋಡುತ್ತ ಕುಳಿತಿರುತ್ತಿದ್ದ ಹುಡುಗನಿಗೆ ಮೇಷ್ಟ್ರು ಕಲೆಯ ರುಚಿ ಹಚ್ಚಿಸಿದರು. ಕಲಾಶಿಕ್ಷಣ ಪಡೆಯುವುದಕ್ಕಾಗಿ ಗುಲ್ಬರ್ಗದ ಐಡಿಯಲ್ ಫೈನ್ ಆರ್ಟ್ ಸ್ಕೂಲ್‌ಗೆ ಬಂದು ಸೇರಿದಾಗ ಪರಿಚಯವಾದದ್ದು ಹೆಸರಾಂತ ಕಲಾವಿದ ಧನಂಜಯ ಶಿಲ್ಪಿ. ಮಹಾಭಾರತ–ರಾಮಾಯಣಗಳ ಜೊತೆಗೆ ಕಲಾವಿದರ ಬಗ್ಗೆ ಕಥೆ ಹೇಳುತ್ತಿದ್ದ ಧನಂಜಯ ಅವರು ಜಗನ್ನಾಥ ಅವರ 'ಶಿಲ್ಪಗುರು'.

ಹೊಟ್ಟೆಪಾಡಿಗಾಗಿ ಸ್ನೇಹಿತರ ಜೊತೆ ಸೇರಿ ಅನ್ವಯಿಕ ಕಲೆ ಕಲಿಯಲು ಹೊರಟರೂ ಅದ್ಯಾಕೊ ಸರಿ ಹೋಗುತ್ತಿಲ್ಲ ಅನ್ನಿಸಿ ಪೇಂಟಿಂಗ್‌ನತ್ತ ಹೊರಳಿದರು. ಸ್ನೇಹಿತರು ಪೇಂಟಿಂಗ್‌ನಲ್ಲಿ ನೆಲೆ ಕಂಡುಕೊಂಡರಾದರೂ ಜಗನ್ನಾಥ ಅವರಿಗೆ ಮಾತ್ರ 'ಶಿಲ್ಪ ನನ್ನ ಕ್ಷೇತ್ರ' ಅನ್ನಿಸಿತು. ಜೊತೆಗೆ ಛಾಯಾಗ್ರಹಣದ ಹುಚ್ಚು ಕೂಡ ಸೇರಿಕೊಂಡಿತ್ತು. ರೋಣ –ಗದಗ ಕಲಾಶಾಲೆಗಳಲ್ಲಿ ಚಿತ್ರಕಲಾ ಅಧ್ಯಾಪಕರಾಗಿ ಕೆಲಕಾಲ ವೃತ್ತಿಜೀವನ ನಡೆಸಿದರೂ ನೆಲೆ ಕಂಡುಕೊಳ್ಳಲಾಗದೇ ಬೆಂಗಳೂರಿಗೆ ಬಂದಾಗ ಸಹಾಯ ಹಸ್ತ ಚಾಚಿದವರು ಶಿಲ್ಪಿ ಅಶೋಕ ಗುಡಿಗಾರ ಮತ್ತು ರಾಜೇಶ ಪತ್ತಾರ. ಕೆಲಕಾಲ ಗುಡಿಗಾರ ಅವರ ಜೊತೆ ಸೇರಿ ಕೆಲಸ ಮಾಡಿದ ಜಗನ್ನಾಥ ಅವರು ನಂತರ ತಾವೇ ಸ್ವಂತ ಕಾರ್ಯಾಗಾರ ಆರಂಭಿಸಿದರು.



'ಸಾಂಪ್ರದಾಯಿಕ ಶಿಲ್ಪಗಳಿಗಿಂತ ಸಮಕಾಲೀನ ಮತ್ತು ನೈಜಕಲಾಕೃತಿಗಳೇ ನನಗಿಷ್ಟ' ಎನ್ನುವ ಜಗನ್ನಾಥ ಅವರು ಹಲವು 'ಮಾಧ್ಯಮ'ಗಳಲ್ಲಿ ಕಲಾಕೃತಿ ನಿರ್ಮಿಸಿದ್ದಾರೆ. 'ಹಿರಿಯ ಶಿಲ್ಪಿ ಎಲ್.ಪಿ. ಅಂಚಿನ್ ಅವರು ಲೋಹ ಬಳಸಿ ಶಿಲ್ಪ ತಯಾರಿಸುತ್ತಿದ್ದರು. ರಿಯಲಿಸ್ಟಿಕ್ ಆದ ಲಂಬಾಣಿ ಬದುಕನ್ನು ಕುರಿತ ಆಕೃತಿಗಳವು. ಆದರೆ, ನಾನು ಆಯಿಲ್ ಫಿಲ್ಟರ್ ಡಬ್ಬ, ನಲ್ಲಿ ಪೈಪ್ ಮತ್ತಿತರ ಸ್ಕ್ರಾಪ್ ವಸ್ತುಗಳನ್ನು ಬಳಸಿ ಈ ಕಲಾಕೃತಿ ನಿರ್ಮಿಸಿದ್ದೇನೆ. ನಂತರ ಕಲರ್‌ನಲ್ಲಿ ಮೆಟಲ್ ಎಫೆಕ್ಟ್ ಕೊಟ್ಟಿದ್ದೇನೆ. ನೋಡಲಿಕ್ಕೆ ಲೋಹಶಿಲ್ಪದಂತೆ ಭಾಸವಾಗುವ ಈ ಆಕೃತಿ ವಾಸ್ತವವಾಗಿ ಅಲ್ಲ' ಎನ್ನುತ್ತಾರೆ.